ಅಲೆಗಳು ಎದ್ದು ದೋಣಿ ಉಯ್ಯಾಲೆಯಂತೆ ಆ ಕಡೆಗೆ ಈ ಕಡೆಗೆ ತೂಗಾಡುವುದರ ಜೊತೆಗೆ ಗಾಳಿ ಬೀಸುತ್ತ ಮಳೆ ರಪರಪನೆ ಬೀಳತೊಡಗಿತು. ದೋಣಿಯ ಮೇಲೆ ಚಪ್ಪರದಂತೆ ಹಾಕಿದ್ದ ಬಟ್ಟೆ ಇದ್ದರೂ ಮಳೆ ಬೀಸಿ ಹೊಡೆಯುತ್ತಿತ್ತು. ಎಡಗಡೆ ಮಳೆ ಬೀಳುತ್ತಿದ್ದಂತೆ ಜನರೆಲ್ಲ ಎದ್ದು ಬಲಗಡೆಗೆ ಬರತೊಡಗಿದರು. ಮಹಿಳೆಯರು ಮಕ್ಕಳ ಜೊತೆಗೆ ಭೀತಿಗೆ ಒಳಗಾದಂತೆ ಪರದಾಡಿದರು. ದೋಣಿಯಲ್ಲಿ ಒಂದು ಕಡೆ ತೂಕ ಹಚ್ಚಾಗಿದ್ದೇ ದೋಣಿ ಇನ್ನೂ ಜೋರಾಗಿ ಉಯ್ಯಾಲೆ ಆಡತೊಡಗಿತು. ಜನರೆಲ್ಲ 'ಅಲ್ಲೇ ಇರಿ. ಈ ಕಡೆಗೆ ಬರಬೇಡಿ' ಎಂದರೂ ಯಾರೂ ಕೇಳದೆ ಬರತೊಡಗಿದರು. ದೋಣಿಯ ಕೆಲಸಗಾರರು ಮಳೆ ಜೋರಾಗಿ ಬೀಳುತ್ತಿದ್ದರೂ ತೂಕ ಕಡಿಮೆ ಇದ್ದ ಕಡೆ ಓಡಿ ಹೋಗಿ ನಿಂತುಕೊಂಡು ಗಂಡಸರನ್ನು ಆ ಕಡೆಗೆ ಬರುವಂತೆ ಕೂಗಿಕೊಂಡರು.

ಗಂಡಸರು ಕೆಲವರು ಆ ಕಡೆಗೆ ಹೋಗಲು ಪ್ರಯತ್ನ ಮಾಡುತ್ತಿದ್ದಂತೆ ಭೀಕರ ಗಾಳಿ ಬೀಸುತ್ತ ಆಕಾಶ ತೂತು ಬಿದ್ದಂತೆ ಮಳೆ ಸುರಿಯ ತೊಡಗಿತು. ಜನರೆಲ್ಲ ಒಂದೇ ಸಮನೆ ಕೂಗಿಕೊಂಡರು. ಆದರೆ ಮಳೆ, ಬಿರುಗಾಳಿಯ ಸಮೇತ ಯಾವ ಕನಿಕರವೂ ತೋರಿಸದೆ ದೋಣಿಯನ್ನು ಸಮುದ್ರಕ್ಕೆ ಮುಗುಚಿಯೇ ಬಿಟ್ಟಿತು. ನನ್ನ ಪಕ್ಕದಲ್ಲಿಯೇ ಇದ್ದ ಸಾವಿತ್ರಿ ನನ್ನ ಒಂದು ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು. ನಾನು ಅವಳ ಕೈಯನ್ನು ಅಷ್ಟೇ ಗಟ್ಟಿಯಾಗಿ ಹಿಡಿದುಕೊಂಡಿದ್ದೆ. ಆದರೆ ನಾವಿಬ್ಬರೂ ಈಗ ಸಮುದ್ರಕ್ಕೆ ಬಿದ್ದುಬಿಟ್ಟೆವು. ನನ್ನ ಸುತ್ತಮುತ್ತಲೂ ಸಮುದ್ರಕ್ಕೆ ಬಿದ್ದ ಗಂಡಸರು, ಹೆಂಗಸರು ಮಕ್ಕಳೆನ್ನದೆ ಎಲ್ಲರೂ ಸಮುದ್ರದಲ್ಲಿ ಕೈಗಳನ್ನು ಹೊಡೆಯುತ್ತ ಕಿರುಚಿಕೊಳ್ಳುತ್ತಿದ್ದರು. ನಮ್ಮ ಗತಿಯೂ ಅದೇ ಆಗಿತ್ತು. ನನಗೆ ಈಜು ಬರುತ್ತಿದ್ದರಿಂದ ಸಾವಿತ್ರಿಯ ನಡುಪಟ್ಟಿಯ ಹಿಂದೆ ಸೀರೆಯನ್ನು ಗಟ್ಟಿಯಾಗಿ ಹಿಡಿದುಕೊಂಡು ಯಾರಾದರು ಸಹಾಯಕ್ಕೆ ಬರುತ್ತಾರೆಂದು ನೋಡುತ್ತಿದ್ದೆ. ಸಾವಿತ್ರಿಯ ಅರ್ಧ ದೇಹ ಸಮುದ್ರದಲ್ಲಿದ್ದು ಕೈಗಳನ್ನು ನೀರಿನ ಮೇಲೆ ಹೊಡೆಯುತ್ತ ಕೂಗಾಡುತ್ತಿದ್ದಳು. ಮಳೆ ಗಾಳಿಯಿಂದ ನಮಗೆ ಏನೂ ಕಾಣಿಸಲಿಲ್ಲ. ನಾವಿಬ್ಬರೂ ಇಷ್ಟು ದೂರ ಬಂದು ಅಂಡಮಾನ್ ಸಮುದ್ರದಲ್ಲಿ ಸತ್ತುಹೋದೆವು ಎಂದುಕೊಳ್ಳುತ್ತ ಕೊನೆಯದಾಗಿ ನಮ್ಮ ಬೆಟ್ಟದಲ್ಲಿ ನೆಲೆ ನಿಂತಿರುವ ಬ್ಯಾಟರಾಯನಸ್ವಾಮಿಯನ್ನು ನೆನೆದುಕೊಂಡೆ! ಸಾವಿತ್ರಿ ಈಗಲೂ ನನ್ನ ಕೈಗಳಲ್ಲೇ ಇದ್ದಳು. ಆದರೆ ನನಗೆ ಪ್ರಜ್ಞೆ ತಪ್ಪಿತು.

***

ಪ್ರಜ್ಞೆ ಬಂದಾಗ ನಾನು, ಸಾವಿತ್ರಿ ಒಂದು ಸಣ್ಣ ಮೀನು ಹಿಡಿಯುವ ದೋಣಿಯಲ್ಲಿ ಬಿದ್ದುಕೊಂಡಿದ್ದೆವು. ನಮ್ಮಿಬ್ಬರನ್ನೂ ಮೀನು ಹಿಡಿಯುವವರು ದಡಕ್ಕೆ ತಂದು ಬಿಟ್ಟಿದ್ದರು. ಸಾವಿತ್ರಿ ತೀರಾ ಹೆದರಿಕೊಂಡು ಗಡಗಡನೆ ನಡುಗುತ್ತಿದ್ದಳು. ಪಕ್ಕದಲ್ಲಿರುವ ಮೀನುಗಾರರು 'ಇನ್ನು ಯಾತಕ್ಕೆ ಹೆದರ್ತೀರಿ? ದಡಕ್ಕೆ ಬಂದುಬಿಟ್ಟರಲ್ಲ. ಇನ್ನೇನು ಆಗುವುದಿಲ್ಲ' ಎಂದು ನಮಗೆ ಸಮಾಧಾನ ಹೇಳಿದರು. ನನ್ನ ಪಾಕೆಟ್‌ನಲ್ಲಿದ್ದ ಅಷ್ಟೂ ಹಣವನ್ನು ಅಲ್ಲಿದ್ದ ಮೀನುಗಾರರಿಗೆ ತೆಗೆದು ಕೊಟ್ಟುಬಿಟ್ಟೆ. ಉಳಿದವರನ್ನು ಮೀನಿನ ದೋಣಿಗಳಲ್ಲಿ ತಂದು ತಂದು ದಡಕ್ಕೆ ಬಿಡುತ್ತಿದ್ದರು. ಕೆಲವು ಮಹಿಳೆಯರು, ಮಕ್ಕಳು ಈಜು ಬರದೇ ಇರುವವರು ಸತ್ತೋಗಿದ್ದಾರೆ ಎಂಬುದಾಗಿ ಪಕ್ಕದಲ್ಲಿದ್ದ ಕೆಲವರು ಮಾತನಾಡಿಕೊಳ್ಳುತ್ತಿದ್ದರು. ಆ ಮಾತುಗಳನ್ನು ಕೇಳಿ ಸಾವಿತ್ರಿ ಅಳತೊಡಗಿದಳು. ನನಗೂ ಕಣ್ಣಿನಲ್ಲಿ ನೀರು ಬರುತ್ತಿತ್ತು. ಸಾವಿತ್ರಿಯನ್ನು ತಬ್ಬಿಕೊಂಡು ಸಮಾಧಾನ ಹೇಳಿದೆ. ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗುವ ವ್ಯವಸ್ಥೆಯನ್ನು ಮಾಡಲಾಯಿತು. ನಾವು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡೆವು. ನಾಲ್ವರು ಮಹಿಳೆಯರು ಇಬ್ಬರು ಮಕ್ಕಳು ಸಮುದ್ರ ಪಾಲಾದರು ಎಂದು ತಿಳಿಯಿತು.

ದೋಣಿಯ ಒಳಗಿದ್ದ ಲೈಫ್ ಜಾಕೆಟ್‌ನಿಂದ ಅಷ್ಟೂ ಜನ ಉಳಿದುಕೊಂಡಿದ್ದರು. ನಾವು ಆ ಘಟನೆ ಆದ ಮೇಲೆ ಎಲ್ಲಿಗೂ ಹೋಗದೆ ಬೆಂಗಳೂರು ಸೇರಿಕೊಂಡಿದ್ದೆವು. ಆ ದಿನ ಬೆಳಿಗ್ಗೆ ಮನಸ್ಸಿನಲ್ಲಿ ಸಣ್ಣದಾಗಿ ತುಂಬಿಕೊಂಡಿದ್ದ ಅಹಿತಕರ ಪ್ರಕ್ಷುಬ್ಧತೆಯ ಬಗ್ಗೆ ನನಗೆ ಜ್ಞಾಪಕಕ್ಕೆ ಬಂದಿತು. ಮುಂದೆ ನಡೆಯುವ ಕೆಟ್ಟ ಘಟನೆಗಳ ಲಕ್ಷಣಗಳು ನನಗೆ ಒಂದು ರೀತಿಯಲ್ಲಿ ಮೊದಲೇ ಗೊತ್ತಾಗುತ್ತಿತ್ತು. ಆದರೆ ಅವುಗಳ ವಿವರ ಏನು ಎಂಬುದು ಮಾತ್ರ ಗೊತ್ತಾಗುತ್ತಿರಲಿಲ್ಲ. ಇದನ್ನು ಆರನೆಯ ಇಂದ್ರಿಯ ಎನ್ನಬಹುದೆ? ಕೊನೆ ರಾತ್ರಿ ಪೋರ್ಟ್ ಬ್ಲೇರ್ ಹೋಟೆಲಿನಲ್ಲಿ ನಿದ್ದೆ ಮಾಡಲೇ ಇಲ್ಲ. ಇಡೀ ರಾತ್ರಿ ದೀಪ ಹೊತ್ತಿಸಿಕೊಂಡು ನನ್ನ ಕೈ ಹಿಡಿದುಕೊಂಡೇ ತೂಕಡಿಸುತ್ತಿದ್ದಳು. ಎಷ್ಟೇ ಧೈರ್ಯ ಹೇಳಿದರೂ ಮಾಮೂಲಿ ಸ್ಥಿತಿಗೆ ಬರಲಿಲ್ಲ. ಆಗಾಗ ವಾಕರಿಸುತ್ತ 'ಥೂ ಥೂ ಮೀನಿನ ವಾಸನೆಯೇ ಬರುತ್ತಿದೆ' ಎನ್ನುತ್ತಿದ್ದಳು. ಒಂದೆರಡು ಸಲ ವಾಂತಿಯೂ ಮಾಡಿಕೊಂಡಿದ್ದಳು. ನಮ್ಮೂರ ಬೆಟ್ಟದ ಮೇಲಿನ ಬ್ಯಾಟರಾಯನಸ್ವಾಮಿಯನ್ನು ಮನಸ್ಸಿನಲ್ಲೇ ಮತ್ತೆ ನೆನೆದುಕೊಂಡೆ. ಸಾವಿತ್ರಿ ನಾನು ಹೇಳುವುದೆಲ್ಲ ಸರಿ ಎಂದರೂ ಆತಂಕದಿಂದ ನರಳುತ್ತಲೇ ಇದ್ದಳು.

ಬೆಂಗಳೂರಿಗೆ ಬಂದ ಮೇಲೆ ನಮ್ಮ ಮುಖಗಳನ್ನು ನೋಡಿದ ತಕ್ಷಣವೇ ನನ್ನ ಅತ್ತೆ ಮಾವ ಏನೋ ದುರಂತ ನಡೆದಿದೆ ಎಂದು ಕೇಳಿಯೇ ಬಿಟ್ಟರು. ಸಾವಿತ್ರಿ ಒಮ್ಮೆಲೆ ಅವರ ಎದುರಿಗೆ ಕುಸಿದು ಬಿದ್ದು ಗಳಗಳನೆ ಅತ್ತುಬಿಟ್ಟಳು. ನಾನು ಅಂಡಮಾನ್ ಸಮುದ್ರದಲ್ಲಿ ನಡೆದ ಎಲ್ಲ ವಿವರಗಳನ್ನು ತಿಳಿಸಿದೆ. ಅನಂತರ ಅತ್ತೆ ಸಾವಿತ್ರಿಯನ್ನು, ನನ್ನನ್ನು ಸ್ನಾನ ಮಾಡುವಂತೆ ತಿಳಿಸಿ ಮನೆಯಲ್ಲಿನ ದೇವರ ಮನೆ ಮುಂದೆ ಕೂರಿಸಿ ದೃಷ್ಟಿ ತೆಗೆದು ಬಿಸಿ ಬಿಸಿ ಕಾಫಿ ಕುಡಿಸಿ ಪಕ್ಕದಲ್ಲಿ ಕೂರಿಸಿಕೊಂಡು ಇಬ್ಬರೂ ಸಾವಿತ್ರಿಗೂ ನನಗೂ ಸಮಾಧಾನ ಹೇಳಿದರು.

'ಕೃಷ್ಣ, ನಿನಗೆ ಈಜು ಬರುತ್ತಿದ್ದರಿಂದ ಇಬ್ಬರೂ ಉಳಿದುಕೊಂಡಿರಿ. ಬಹುಶಃ ನಿಮಗಿಬ್ಬರಿಗೂ ನೀರಿನಲ್ಲಿದ್ದ ಯಾವುದೋ ಕಾಲದ ಒಂದು ಗಂಡಾಂತರ ತಪ್ಪಿದೆ. ಇನ್ನೇನೂ ಭಯ ಪಡಬೇಡಿ. ಇಂತಹ ಘಟನೆಗಳು ಬದುಕಿನಲ್ಲಿ ನಡೆಯುವುದು ಸಹಜ. ಸ್ವಲ್ಪ ದಿನ ಅದು ಮನಸ್ಸಿನಿಂದ ಬಿಟ್ಟುಹೋದರೆ ಎಲ್ಲವೂ ಸರಿಹೋಗುತ್ತದೆ' ಎಂದರು. ಮರುದಿನ ನನ್ನ ತಂದೆ ತಾಯಿ ಇಬ್ಬರೂ ಬಂದು ಅದೇ ರೀತಿ ಸಮಾಧಾನ ಹೇಳಿದ್ದರು. ನನ್ನ ತಾಯಿ ನಮ್ಮ ಊರಿನಿಂದ ಬ್ಯಾಟರಾಯನಸ್ವಾಮಿ ಮತ್ತು ಗಂಗಮ್ಮನ ಗುಡಿಯಿಂದ ಕುಂಕುಮ ತಂದು ನಮ್ಮಿಬ್ಬರ ಹಣೆಗಳಿಗೆ ಇಟ್ಟು 'ಜನರ ದೃಷ್ಟಿ ನಿಮ್ಮಿಬ್ಬರ ಮೇಲೆ ಬಿದ್ದು ಹಾಗಾಗಿರಬೇಕು' ಎಂದರು. ಇದೆಲ್ಲ ನಿಜವೇ? ಜನರ ದೃಷ್ಟಿಗೆ ಅಷ್ಟು ಶಕ್ತಿ ಇರುತ್ತದೆಯೆ? ಬಹುಶಃ ಹಿಂದಿನ ಕಾಲದಲ್ಲಿ ತಾಂತ್ರಿಕರಿಗೆ ಇದರ ಬಗ್ಗೆ ಗೊತ್ತಿರಬೇಕು ಎಂದುಕೊಂಡೆ. ಅಥವಾ ಕೆಲವು ಕ್ಷುದ್ರ ಶಕ್ತಿಗಳು ಅಡ್ಡ ಬರುವುದರಿಂದ ಹೀಗಾಗುತ್ತದೆಯೆ? ಇಲ್ಲ! ಯಾರೋ ಮಂತ್ರಿಸಿ ಬಿಸಾಕಿರುವ ನಿಂಬೆಕಾಯಿಗಳನ್ನು ದಾಟುವುದರಿಂದ ಈ ರೀತಿ ಆಗುತ್ತದೆಯೆ? ಹಾಗೆ ಆಗಿದ್ದರೆ ನಾವಿದ್ದ ದೋಣಿಯಲ್ಲಿನ ಎಲ್ಲರಿಗೂ ಆಗಿರಬೇಕಲ್ಲವೆ? ಎಲ್ಲವೂ ಸುಳ್ಳು. ಆದರೆ ಅಂತಹ ಪರಿಸ್ಥಿತಿಗಳಿಂದ ಭೀತಿಗೆ ಒಳಗಾಗುವುದು ಮಾತ್ರ ನಿಜ.

***

ಸಾವಿತ್ರಿಯ ಅಣ್ಣ ರಾಮಚಂದ್ರ, ಡಾಕ್ಟರ್ ರಾಮಚಂದ್ರ ಆದ ಮೇಲೆ ವಿದೇಶಕ್ಕೆ ಹೋಗದೆ ಬೆಂಗಳೂರಿನಲ್ಲೇ ಎಂ.ಡಿ. ಓದಿ ಮುಗಿಸಿದ್ದ. ಅದರ ನಂತರ ಒಂದು ವರ್ಷ ಸರಕಾರಿ ಆಸ್ಪತ್ರೆಯಲ್ಲಿ ಅಭ್ಯಾಸ ಮಾಡಿದ ಮೇಲೆ ಮಲ್ಲೇಶ್ವರಂನಲ್ಲಿಯೇ




## ಪಾಠ

ಬಲೆಯನ್ನು ಮತ್ತೆ ಮತ್ತೆ
ಹೆಣೆಯುತ್ತಿತ್ತು ಜೇಡ
ಕಲಿಸಿತು ನನಗೆ
ಪಾಠ
ಸೋಲಿಗೆ ಹೆದರಬೇಡ!

**– ಕಾಸರಗೋಡು ಅಶೋಕ್ ಕುಮಾರ್**